ಸೆಪ್ಟೆಂಬರ್ 25, 2007

**ರೂ. 2/–ರ ಮೌಲ್ಯವರ್ಗದ "ಪ್ಲಾಟಿನಮ್ ಜೂಬಿಲಿ ಆಫ್ ಇಂಡಿಯನ್ ಏರ್ ಫೋರ್ಸ್ (1932–2007)" ಸಂದೇಶ ಸಾರುವ ಫೆರಿಟಿಕ್ ತುಕ್ಕು ರಹಿತ ಉಕ್ಕಿನ ನಾಣ್ಯಗಳು**

"ಪ್ಲಾಟಿನಮ್ ಜೂಬಿಲಿ ಆಫ್ ಇಂಡಿಯನ್ ಏರ್ ಫೋರ್ಸ್ (1932–2007)" ಸಂದೇಶ ಹೊಂದಿರುವ ರೂ. 2/–ರ ಮೌಲ್ಯವರ್ಗದ ಹೊಸ ಫೆರ್ರಿಟಿಕ್ ತುಕ್ಕು ರಹಿತ ಉಕ್ಕಿನ ನಾಣ್ಯಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಸಧ್ಯದಲ್ಲಿಯೇ ಬಿಡುಗಡೆ ಮಾಡಲಿದೆ.

ಕೆಳಗೆ ಸೂಚಿಸಿರುವ ಪರಿಮಾಣ, ವಿನ್ಯಾಸ, ಸಂರಚನೆಗೆ ಅನುಗುಣವಾಗಿ ಈ ನಾಣ್ಯಗಳು ಇರುತ್ತವೆ.

| **ನಾಣ್ಯದ ಮೌಲ್ಯವರ್ಗ** | **ಆಕಾರ ಮತ್ತು ಹೊರಸುತ್ತಳತೆ** | **ಲೋಹಾಂಶ** |
|---|---|---|
| ಎರಡು ರೂಪಾಯಿಗಳು | 27 ಮಿ.ಮಿ.ಗಳ ವೃತ್ತಾಕಾರ | ಫೆರಿಟಿಕ್ ತುಕ್ಕುರಹಿತ ಉಕ್ಕು<br>ಕಬ್ಬಿಣ – 83%<br>ಕ್ರೋಮಿಯಮ್ – 17% |

**ವಿನ್ಯಾಸಗಳು:**

**ಮುಂಭಾಗ :**
ಎರಡು ಅಡ್ಡ ಸಾಲುಗಳುಳ್ಳ ಮೂರು ಭಾಗಗಳಲ್ಲಿ ನಾಣ್ಯದ ಮುಖವನ್ನು ವಿಭಜಿಸಲಾಗಿದೆ. ಎಡಗಡೆಯ ಮಧ್ಯಭಾಗವು **'सत्यमेव जयते'** ಎಂಬ ಸಂಕೇತಾಕ್ಷರ ಕೆತ್ತಿರುವ ಅಶೋಕ ಸ್ತಂಭದ "ಸಿಂಹ ಮುದ್ರೆ"ಯನ್ನು ಹೊಂದಿರುತ್ತದೆ. ಬಲಗಡೆಯ ಮಧ್ಯಭಾಗದಲ್ಲಿ "2" ಮೌಲ್ಯವರ್ಗವನ್ನು ಅಂತರ್ರಾಷ್ಟ್ರೀಯ ಸಂಖ್ಯೆಯಲ್ಲಿ ನಮೂದಿಸಿದ್ದು, ಮೇಲಿನ ಭಾಗದಲ್ಲಿ **'भारत'** ಎಂಬ ಹಿಂದಿ ಪದವನ್ನು ಹಾಗೂ ಬಲಭಾಗದಲ್ಲಿ **"INDIA"** ಎಂಬ ಇಂಗ್ಲಿಷ್ ಪದವನ್ನು ಹೊಂದಿದ್ದು, ಕೆಳಭಾಗದಲ್ಲಿ **"रुपये"** ಎಂದು ಹಿಂದಿಯಲ್ಲಿ ಮತ್ತು **"Rupees"** ಎಂದು ಇಂಗ್ಲಿಷ್ ಪದವನ್ನು ಹೊಂದಿರುತ್ತದೆ.

**ಹಿಂಭಾಗ:**
ಭಾರತೀಯ ಏರ್ ಫೋರ್ಸ್‌ನ 75 ವರ್ಷಗಳ ಅಮೋಘ ಸೇವೆಯ ಮಹತ್ವವನ್ನು ತೋರುವ ಮೊದಲ ಯುದ್ಧ ವಿಮಾನ – ವಾಪಿತಿ – ಹಾಗೂ ಇತ್ತೀಚೆಗಿನ ವಿವಿಧೋಪಯೋಗಿ ಕದನ ವಿಮಾನ ಎಸ್ ಯು 30 ಎಂ ಕೆ 1, ಚಿಹ್ನೆಯನ್ನು ನಾಣ್ಯದ ಮುಖಭಾಗ ಹೊಂದಿದೆ.

ಮೇಲಿನ ಮೇರೆಯಲ್ಲಿ **"प्लैटिनम जुबली"** ಎಂದು ಹಿಂದಿಯಲ್ಲೂ, ಕೆಳಗಿನ ಮೇರೆಯಲ್ಲಿ "PLATINUM JUBILEE " ಎಂದು ಇಂಗ್ಲಿಷ್‌ನಲ್ಲೂ, ಅದರ ಮೇಲೆ ಅಂತರ್ರಾಷ್ಟ್ರೀಯ ಅಂಕಿಯಲ್ಲಿ "1932–2007" ಎಂದು ವರ್ಷವನ್ನು ಮಧ್ಯದ ಎಡ ಮೇರೆಯಲ್ಲಿ "INDIAN AIR FORCE"

ಎಂದು ಇಂಗ್ಲಿಷ್‌ನಲ್ಲೂ, ಮಧ್ಯದ ಬಲಮೇರೆಯಲ್ಲಿ **"भारतीय वायु सेना"** ಎಂದು ಹಿಂದಿಯಲ್ಲಿ ಬರೆದಿರುತ್ತದೆ.

1906ರ ನಾಣ್ಯ ಕಾಯಿದೆಯಲ್ಲಿ ಅವಕಾಶ ಕಲ್ಪಿಸಿದಂತೆ ನಾಣ್ಯವು ಶಾಸನಬದ್ಧ ನೀಡಿಕೆಯಾಗಿದೆ. ಹಾಲಿ ಇರುವ ಎರಡು ರೂಪಾಯಿ ನಾಣ್ಯಗಳೂ ವಿಧಿಮಾನ್ಯ ಚಲಾವಣೆಯಲ್ಲಿ ಮುಂದುವರಿಯುತ್ತವೆ.

**ಅಜಿತ್ ಪ್ರಸಾದ್**
**ವ್ಯವಸ್ಥಾಪಕರು**

ಪತ್ರಿಕಾ ಪ್ರಕಟಣೆ : 2007 – 2008 / 417